ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 3, Nov-Dec 2021, Pp 15-24**
**©*IIMRD*, Mysuru**
IIMRD JOURNALS

**www.iimrd.com**

# ಜಿ.ಆರ್.ತಿಪ್ಪೇಸ್ವಾಮಿ ಹಾಗೂ ವಿಮರ್ಶಾ ಸಾಹಿತ್ಯ

**ಜಗನ್ನಾಥ. ಎಸ್. ಪುಲ್ಲಾನೋರ್[1]**
[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

## ಸಾರಾಂಶ (Abstract)

*ತಿಪ್ಪೇಸ್ವಾಮಿಯವರ ವಿಮರ್ಶಾ ಪ್ರಜ್ಞೆಯ ಮೇಲೆ ಆಗಾಧವಾದ ಪ್ರಭಾವವನ್ನು ಬೀರಿದೆ. ಆದ್ದರಿಂದ ಅವರ ಲೇಖನಗಳಲ್ಲಿ ಹೆಚ್ಚಾಗಿ ಸಾಹಿತ್ಯ ಮತ್ತು ಸಮಾಜ, ಸಮಾಜ ಮತ್ತು ಸಂಸ್ಕೃತಿ, ಮತ್ತು ಮನುಷ್ಯ ಈ ನೆಲೆಗಳ ಶೋಧನೆಯೇ ಮುಖ್ಯವಾಗಿದೆ. ಹಳಗನ್ನಡ ಕೃತಿಯಾಗಲಿ, ಹೊಸಗನ್ನಡವಾಗಲಿ ಅಷ್ಟಕ್ಕೆ ಅವರಿಗೆ ಪ್ರೀಯವಾಗಿರುವ ಜಾನಪದವೇ ಆಗಿರಲಿ ಅವರಿಗೆ ಮೇಲಿನ ನೆಲೆಗಳಲ್ಲಿಯೇ ಅಧ್ಯಯನ ಮಾಡುವ ಸೂಕ್ಷ್ಮತೆ ಅವರದು. ಸಾಹಿತ್ಯವನ್ನು ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡುವ ಕ್ರಮ ಬಂಡಾಯ ಚಳುವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡದ್ದಲ್ಲ.* ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಯ ನೆಲೆಗಳ ಶೋಧನೆಯೇ ಮುಖ್ಯವಾಗಿದೆ.

**ಮುಖ್ಯಪದಗಳು (Keywords):** ಬಂಡಾಯ ಸಾಹಿತ್ಯ, ಚಳುವಳಿ, ಜಾತಿ, ವರ್ಣ.

### ಪೀಠಿಕೆ

ಡಾ. ಜಿ.ಆರ್.ತಿಪ್ಪೇಸ್ವಾಮಿ ಬರೆಯಲು ಪ್ರಾರಂಭಮಾಡಿದ್ದು ಎಂಬತ್ತರ ದಶಕದಿಂದೀಚೆಗೆ. ಹೀಗಾಗಿ ಸಹಜವಾಗಿ ಎಂಬತ್ತೆ ಬಂಡಾಯ ಸಾಹಿತ್ಯ ಚಳುವಳಿ ಪ್ರಖರವಾಗಿದ್ದಂತಹ ಸಂದರ್ಭ. ಇದು ತಿಪ್ಪೇಸ್ವಾಮಿಯವರ ವಿಮರ್ಶಾ ಪ್ರಜ್ಞೆಯ ಮೇಲೆ ಆಗಾಧವಾದ ಪ್ರಭಾವವನ್ನು ಬೀರಿದೆ. ಆದ್ದರಿಂದ ಅವರ ಲೇಖನಗಳಲ್ಲಿ ಹೆಚ್ಚಾಗಿ ಸಾಹಿತ್ಯ ಮತ್ತು ಸಮಾಜ, ಸಮಾಜ ಮತ್ತು ಸಂಸ್ಕೃತಿ, ಮತ್ತು ಮನುಷ್ಯ ಈ ನೆಲೆಗಳ ಶೋಧನೆಯೇ ಮುಖ್ಯವಾಗಿದೆ. ಹಳಗನ್ನಡ ಕೃತಿಯಾಗಲಿ, ಹೊಸಗನ್ನಡವಾಗಲಿ ಅಷ್ಟಕ್ಕೆ ಅವರಿಗೆ ಪ್ರೀಯವಾಗಿರುವ ಜಾನಪದವೇ ಆಗಿರಲಿ ಅವರಿಗೆ ಮೇಲಿನ ನೆಲೆಗಳಲ್ಲಿಯೇ ಅಧ್ಯಯನ ಮಾಡುವ ಸೂಕ್ಷ್ಮತೆ ಅವರದು. ಸಾಹಿತ್ಯವನ್ನು ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡುವ ಕ್ರಮ ಬಂಡಾಯ ಚಳುವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡದ್ದಲ್ಲ.

ನವೋದಯ ಕಾಲದಿಂದಲೂ ಅಂದರೆ ಕನ್ನಡ ವಿಮರ್ಶಾ ಪ್ರಾರಂಭವಾದದ್ದಿಂದಲೂ ಈ ಬಗೆಯ ಅಧ್ಯಯನ ಬೆಳೆದು ಬಂದಿದೆ. ಆದರೆ ಬಂಡಾಯ ಚಳುವಳಿಯ ಸಂದರ್ಭದಲ್ಲಿ ಇದು ಹೆಚ್ಚು ಚಾಲ್ತಿಗೆ

*Please cite this article as: ಜಗನ್ನಾಥ. ಎಸ್. ಪುಲ್ಲಾನೋರ್. (2021).* ಜಿ.ಆರ್.ತಿಪ್ಪೇಸ್ವಾಮಿ ಹಾಗೂ ವಿಮರ್ಶಾ ಸಾಹಿತ್ಯ*.: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 15–24*

ಬಂತು. ಎಲ್ಲರೂ ಈ ಮಾದರಿಯನ್ನು ಬಳಸಲು ತೊಡಗಿದರು. ತಿಪ್ಪೇಸ್ವಾಮಿಯವರು ಈ ಮಾದರಿಯನ್ನು ಆಯ್ಕೆ ಮಾಡಿಕೊಂಡು ಬರೆಯಲು ತೊಡಗಿ ನಂತರದ ವಿಮರ್ಶಾ ವಿಧಾನಗಳನ್ನು ಅಳವಡಿಸಿಕೊಂಡು ಸುಮಾರು 22 ವಿಮರ್ಶಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ತಿಪ್ಪೇಸ್ವಾಮಿಯವರ ಎಲ್ಲಾ ಲೇಖನಗಳಲ್ಲಿ ಮೊದಲೇ ತಿಳಿಸಿದಂತೆ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಯ ನೆಲೆಗಳ ಶೋಧನೆಯೇ ಮುಖ್ಯವಾಗಿದೆ. ಕ್ರಿಸ್ಟಾಫರ್‌ಕಾಲ್ಡ್ ವೆಲ್‌ನು ಹೇಳುವ "ಕಾವ್ಯದ ಮಾಧ್ಯಮ ಭಾಷೆ, ಭಾಷೆ ಸಮಾಜದ ಸೃಷ್ಟಿ ಆದುದ್ದರಿಂದ ಸಮಾಜದ ಅಧ್ಯಯನ ಮಾಡದೇ ಸಾಹಿತ್ಯದ ಅಧ್ಯಯನ ಮಾಡುವಂತಿಲ್ಲ" ಎಂಬ ಮಾತುಗಳಿಗೆ ಅನುಗುಣವಾದ ಅಧ್ಯಯನದ ಕ್ರಮ ತಿಪ್ಪೇಸ್ವಾಮಿಯ ಬರಹಗಳಲ್ಲಿದೆ.

ಚರಿತ್ರೆಯ ಪೂರ್ವದಲ್ಲಿ ಮಾನವನು ನಿಸರ್ಗದೊಡನೆ ಹೊರಾಟ ಮಾಡಬೇಕಿತ್ತು ಈ ಹೋರಾಟ ಆ ಕಾಲದ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿದೆ. ಈ ಹೋರಾಟದಲ್ಲಿ ಮಾನವನು ಸಂಘಟಿತನಾಗಬೇಕಾಯಿತು. ಪರಸ್ಪರ ಸಹಕರಿಸಬೇಕಾಯಿತು ಹಾಗು ಸಮಾಜ ರೂಪ ಪಡೆಯಿತು. ಅವರ ಆಸೆ, ಸೋಲು, ಕನಸುಗಳನ್ನು ಅಭಿವ್ಯಕ್ತಿಸುವ ಸಾಹಿತ್ಯವು ಕೂಡ ಸಾಮಾಜಿಕವಾಯಿತು. ಈ ಘಟ್ಟದಲ್ಲಿ ಸಾಹಿತ್ಯ ಇಡೀ ಸಮಾಜದ ವಾಣಿಯಾಯಿತು. ಅನಂತರ ಸಮಾಜದಲ್ಲಿ ಆಳುವವರು ಆಳಿಸಿಕೊಳ್ಳುವವರು ಎಂಬ ಎರಡು ವರ್ಗಗಳಾದವು. ಭಾರತೀಯ ಸಮಾಜದಲ್ಲಿ ಇನ್ನು ಮುಂದೆ ಹೋಗಿ ಜಾತಿ, ವರ್ಣ ಎಂಬ ವ್ಯವಸ್ಥೆ ರೂಪಗೊಂಡಿತು. ಇಂತಹ ಸಂದರ್ಭದಲ್ಲಿ ವಿಮರ್ಶಾ ಸಾಹಿತ್ಯ ಅಸ್ಥಿತ್ವಕ್ಕೆ ಬಂದಿತು.

**ವಿಮರ್ಶಾ ಕೃತಿಗಳ ವಿವರಣೆ**

ಜಿ.ಆರ್.ತಿಪ್ಪೇಸ್ವಾಮಿ ಕಳೆದ ಮೂರು ವರ್ಷಗಳ ಅಂತರದಲ್ಲಿ ಬರೆದು ಪ್ರಕಟಿಸಿರುವ ಕೆಲವು ಲೇಖನಗಳ ಸಂಕಲನವಾದ ಈ 'ಪ್ರಸ್ತಾಪ' ಇಲ್ಲಿ ಸೇರ್ಪಡೆಯಾಗಿರುವ ಲೇಖನಗಳು ಬೇರೆ ಬೇರೆ ಸಂದರ್ಭಗಳ ವಿವಿಧ ಸಾಹಿತ್ಯಿಕ ಸಂಕಲನಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಇವನ್ನು ಕೃತಿ ವಿಮರ್ಶೆಗೆ ಸಂಬಂಧಿಸಿದ್ದು. ವಿವಿಧ ವಿಷಯಗಳಿಗೆ ಸಂಬಂಧಿಸಿದ್ದು ಎಂದು ಎರಡು ಭಾಗವಾಗಿ ವರ್ಗಿಕರಿಸಬಹುದು. 'ಪ್ರಾಚೀನ ಭಾರತದಲ್ಲಿ ಶಿಕ್ಷಾ ಪದ್ಧತಿ' ದುಡಿಯುವ ವರ್ಗದ ಸೂಕ್ಷ್ಮಗಳನ್ನು ಬಿಡಿಸುವ ಒಳ್ಳೆಯ ಲೇಖನ. ಅವರ ಮೂಳೆಗಳ ತಳಹದಿಯ ಮೇಲೆ ತಮ್ಮ ನೆಲೆಗಟ್ಟನ್ನು ರೂಪಿಸಿಕೊಂಡ ವಾಸ್ತವ ಚಿತ್ರಣ ಚರಿತ್ರೆಯನ್ನು ಅಧ್ಯಯನ ಮಾಡಿದವರಿಗೆಲ್ಲ ತಿಳಿದಿದ್ದೆ. ಈ ದುಡಿಯುವವರ ಕರುಣಾಜನಕ ಸ್ಥಿತಿಯನ್ನು ಹೊಸ ರೀತಿಯಲ್ಲಿ ವಿಶ್ಲೇಷಿಸುವ ಸಂಧರ್ಭದಲ್ಲಿ ಜಿ.ಆರ್.ತಿಪ್ಪೇಸ್ವಾಮಿವರ ಲೇಖನ ಗಮನಾರ್ಹವೆನಿಸುತ್ತದೆ. ಅಷ್ಟೆ ಅಲ್ಲ, ಆಳುವವರ ಮತ್ತು ಪುರೋಹಿತಶಾಹಿಗಳ ಬೇರೆ ಮುಖಗಳನ್ನು ಚಿತ್ರಿಸಲು ಇದು ಮುಖ್ಯವೆನಿಸುತ್ತದೆ.

ನಾಟಕ ಮತ್ತು ಸಾಮಾಜಿಕ ಪ್ರಜ್ಞೆ ಯಲ್ಲಿ ಪ್ರಖರ ಸಾಮಾಜಿಕ ಪ್ರಜ್ಞೆಯುಳ್ಳ ಕೆಲವು ನಾಟಕಗಳನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಬಂಡಾಯ ಕಾವ್ಯ ಚಿಗುರೊಡೆಯುತ್ತಿರುವ ಸಂದರ್ಭದಲ್ಲಿ ಅದರ ಎಲ್ಲ ಲಕ್ಷಣಗಳನ್ನು ತುಂಬಿಕೊಂಡು ಹೊರ ಬಂದಿರುವ 'ಸಾವಿರಾರು ನದಿಗಳು' ಸಂಕಲನದ ಮತ್ತು ಆ ಕವಿಯ ಯಶಸ್ಸನ್ನು ಗುರುತಿಸಿರುವ ಸಮರ್ಥ ಲೇಖನ 'ಸಿದ್ದಲಿಂಗಯ್ಯನವರ ಸಾವಿರಾರು ನದಿಗಳು' ಜಾನಪದ ಸಂಗ್ರಹ ಮತ್ತು ಅದರ ಅಧ್ಯಯನ–ಹೊಸ ತಿರುವು ಪಡೆಯುತ್ತಿರುವ ಈ ಸಂಧರ್ಭದಲ್ಲಿ ಹೊಸ ಅಲೆ

ಎಬ್ಬಿಸಿದ 'ಲಿಖಿತ ಜಾನಪದ' ಲೇಖನ ಸಂಸ್ಕೃತಿಗೆ ಯಾವ ರೀತಿಯಲ್ಲಿ ಸಂಬಂಧಿಸಿದೆ ಎಂಬುದರ ದೀರ್ಘ ವಿಶ್ಲೇಷಣೆ ನಡೆಸುವುದರ ಮೂಲಕ ಕನ್ನಡ ಜಾನಪದದಲ್ಲಿ ಹೊಸ ಶಾಖೆಯೊಂದನ್ನು ಸ್ವಾಗತಿಸಿದ್ದಾರೆ. ಈ ದೃಷ್ಟಿಯಲ್ಲಿ 'ಲಿಖಿತ ಜಾನಪದ ಹೊಸ ದೃಷ್ಟಿಯ ದಾಖಲೆ' ಎಂಬ ಹೆಸರಿಗೆ ಸಾರ್ಥಕವಾಗಿದೆ.

ಡಾ.ಕಂಬಾರರು 'ನಮ್ಮ ಜಾನಪದ'ದಲ್ಲಿ ಜಾನಪದ ಮತ್ತು ರಂಗಭೂಮಿಯ ಚಟುವಟಿಕೆಗಳಲ್ಲಿ ಕಂಬಾರರ ಸಾಧನೆಗಳನ್ನು ಕುರಿತ ಚರ್ಚೆ ಇದೆ. 'ಎರಡು ಸಸ್ಯ ಸಂಬಂಧಿ ಆಚರಣೆಗಳು' ಎಂಬ ಲೇಖನದಲ್ಲಿ ಮಾನವನ ಬದುಕಿಗೆ 'ಎಕ್ಕ' ಮತ್ತು' ಬಾಳೆ'ಗಳು ಯಾವ ರೀತಿಯಲ್ಲಿ ಸಂಬಂಧಿಸಿವೆ ಎಂಬುದರ ಸ್ಥೂಲ ಪರಿಚಯವಿದೆ. ಈ ಪುಸ್ತಕದ ಕೊನೆಯ ಲೇಖನ ಸಂಗ್ರಹ ಅಥವಾ ಕ್ಷೇತ್ರ ಕಾರ್ಯಕ್ಕೆ ಸಂಬಂಧಿಸಿದ್ದಾದರೂ ಒಂದು ಪ್ರದೇಶದ ಜನರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಹೀಗೆ ಇಲ್ಲಿಯ ಎಲ್ಲ ಲೇಖನಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಗಮನವನ್ನು ಸೆಳೆಯುತ್ತವೆ. ಜೊತೆಗೆ ಕೃತಿ ವಿಮರ್ಶೆಯ ದೃಷ್ಟಿಕೋನವು ಸಮಕಾಲೀನ ಸಂದರ್ಭವನ್ನು ಅವಲಂಬಿಸಿದೆ. ಈ ಲೇಖನಗಳಲ್ಲಿ ಅರೆಕೊರೆಗಳು ಇವೆಯಾದರೂ ಮೇಲೆ ಹೇಳಿದ ಗುಣಾಂಶಗಳಿಂದಾಗಿ ಪುಸ್ತಕ ಬೆಲೆ ಕಟ್ಟಿಸಿಕೊಳ್ಳುತ್ತದೆ. ಕೇವಲ ಪ್ರಶಂಸೆ ಇಲ್ಲವೆ ಅವಹೇಳನ ಮಾಡುವ ಅಸಹ್ಯ ಅತಿಗಳಿಗೆ ಬಲಿಯಾಗದೆ ತಮ್ಮ ಬರವಣಿಗೆಯನ್ನು ಶುದ್ಧ ವಸ್ತುನಿಷ್ಠ ವಿಮರ್ಶೆಗೆ ಇನ್ನು ಮುಂದೆಯೂ ಜಿ.ಆರ್.ತಿಪ್ಪೇಸ್ವಾಮಿ ಮೀಸಲಿಡಲೆಂದು ಹಾರೈಸುತ್ತೇನೆ.

**ಪ್ರಣೀತ**

ಪ್ರಣೀತ'ದಲ್ಲಿ ಸೇರಿರುವ ಬರಹಗಳನ್ನು ತಾತ್ವಿಕ ದಿಗ್ದರ್ಶನ ಸಂದರ್ಶನ ಮತ್ತು ಬಿಡಿ ಕೃತಿಗಳ ಅವಲೋಕನ ಎಂದು ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು. ಇಲ್ಲಿ ಸಂಕಲಿತಗೊಂಡಿರುವ ಪ್ರಬಂಧಗಳಲ್ಲಿ ತಿಪ್ಪೇಸ್ವಾಮಿ ಅವರಿಗೆ ಅಧ್ಯಯನದಲ್ಲಿರುವ ಅಪಾರ ಶ್ರದ್ಧೆಯನ್ನು ಶ್ರಮವನ್ನು ಗುರುತಿಸಬಹುದು. ಹೇಳುವುದನ್ನು ವಿಚಾರದ ಮೂಸೆಯಲ್ಲಿ ಕರಗಿಸಿಕೊಡಬೇಕೆನ್ನುವ ಹಂಬಲ ಸ್ವತಂತ್ರವಾದ ಬೌದ್ಧಿಕ ನೆಲೆಯಲ್ಲಿ ತಾವು ಚರ್ಚಿಸುವ ವಿಷಯವನ್ನು ಮಂಡಿಸುವ ಕಾತುರ ಅವರದು.

'ಪ್ರಣೀತದ ಲೇಖನಗಳಲ್ಲಿ ಹೆಚ್ಚು ಪುಟಗಳು ಜಾನಪದಕ್ಕೆ ಲಭ್ಯವಾಗಿವೆ. ಈ ವಿಷಯದ ಬಗ್ಗೆ ಅವರಿಗಿರುವ ಆತ್ಮೀಯ ಒಲವು ಮತ್ತು ಒಳತಿಳಿವುಗಳು ಚೆನ್ನಾಗಿ ರೂಪ ಪಡೆದಿವೆ. ಸಾಮಾನ್ಯವಾಗಿ ಜಾನಪದದ ಮೇಲೆ ಇರುವ ಎರಡು ಅತಿರೇಕಗಳ ಪೂರ್ಣ ಪುರಸ್ಕಾರ ಅಥವಾ ತೀರಾ ತಿರಸ್ಕಾರಗಳ ನಡುವೆ ಅವರ ನಿಲುವಿರುವುದು ವಿಹಿತವಾಗಿದೆ. ಇದರಿಂದ ಅವರ ವಿಮರ್ಶೆಗೆ ಸಮತೂಕ ಪ್ರಾಪ್ತವಾಗಿದೆ.

ಜನಪದ ಸಾಹಿತ್ಯ ಐತಿಹಾಸಿಕ ಮೂಲ ಸಾಮಗ್ರಿಯಾಗಿದೆ ಎಂಬುದು ಒಂದು ಹೊಸ ಬಗೆಯ ಲೇಖನ ಇತಿಹಾಸ ನಿರ್ಮಿಸಲು ಜನಪದ ಸಾಹಿತ್ಯ ಎಷ್ಟರಮಟ್ಟಿಗೆ ಸಾಮಗ್ರಿ ಒದಗಿಸಬಲ್ಲದು ಎಂದು ವಿವರಿಸುವ ದೀರ್ಘ ಪ್ರಬಂಧ ನಾನಾ ಲಾವಣಿಗಳು ಗೀತೆಗಳನ್ನು ವಿಶ್ಲೇಷಿಸುವಾಗ ತಿಪ್ಪೇಸ್ವಾಮಿ ಅವರು ತೋರುವ ಎಚ್ಚರ ವಿವೇಕ ವೈಜ್ಞಾನಿಕ ಮನೋಭಾವ ಐತಿಹಾಸಿಕ ದೃಷ್ಟಿ ಅನುಕರಣೀಯವಾಗಿವೆ. ಉದಾಹರಣೆಗೆ 'ಮಾಗಡಿ ಕೆಂಪೇಗೌಡ' ಗೀತೆಯನ್ನು ಸಾಹಿತ್ಯಿಕ ಚಾರಿತ್ರಿಕ ಧಾರ್ಮಿಕ ಮತ್ತು ಸಾಮಾಜಿಕ ಎಂಬ ನಾಲ್ಕು

ನಿಟ್ಟಿನಿಂದ ಅವಲೋಕಿಸುವ ರೀತಿ ಅನನ್ಯವಾಗಿದೆ. ವಂದರಿಯಾಡಿ ಕಸಕಡ್ಡಿ ತೆಗೆದು ಒಳ್ಳೆಯ ಕಾಳನ್ನು ಆಯ್ದುಕೊಳ್ಳುವ ಧೀಮಂತಿಕೆ ಇದೆ.

"ಐತಿಹಾಸಿಕ ಪರಿಶೀಲಿಸಿದಾಗ ಸಾಮಾನ್ಯ ವ್ಯಕ್ತಿಯಾಗಿದ್ದ ಕೆಂಪೇಗೌಡರು ಮಾಗಡಿಯ ರಾಜನಾದದ್ದು ಮಾತ್ರ ಸತ್ಯ. ಇದಕ್ಕೆ ಕಾರಣ ಪರಿಶ್ರಮ ಇಂದಿನ ಸಮಾಜದಲ್ಲಿ ಉತ್ತಮ ಮಟ್ಟಕ್ಕೆ ಏರಬೇಕೆಂದು ಬಯಸುವ ಆ ದಿಕ್ಕಿನಲ್ಲಿ ಶ್ರಮಿಸುವ ಎಷ್ಟೊ ಜನ ತಮ್ಮ ದಾರಿದ್ರ್ಯವನ್ನು ನೀಗಿಸಿಕೊಂಡು ಉತ್ತಮ ಸ್ಥಾನಮಾನಗಳನ್ನು ಗಳಿಸಿಕೊಂಡಿದ್ದಾರೆ.  ಅದೇ ರೀತಿ ಕೆಂಪೇಗೌಡನೂ ತೋಟದಲ್ಲಿ ಮಲಗಿದ್ದಾಗ ಅವನ ಮೇಲೆ ಸರ್ಪ ಹೆಡೆ ಎತ್ತಿ ನಿಂತದ್ದು ಅದನ್ನು ಕಂಡು ಹಾರುವ ಯಜಮಾನ ಮುಂದೆ ಅವನು ರಾಜನಾಗುವನೆಂದು ಭಾವಿಸಿದ್ದು, ಮಾಗಡಿಯ ರಂಗಧಾಮನು ಕೆಂಪೇಗೌಡನ ಕಷ್ಟ ನಿವಾರಣೆಗಾಗಿ ಕಾಣಿಸಿಕೊಂಡದ್ದು–ಇವೆಲ್ಲಾ ಐತಿಹಾಸಿಕ ಸತ್ಯಗಳಾಗಿರಲು ಸಾಧ್ಯವಿಲ್ಲ. ವೈಜ್ಞಾನಿಕ ವಿಶ್ಲೇಷಣೆಗೆ ಈ ವಿಚಾರವನ್ನು ಒಳಗು ಮಾಡಿ ನೋಡಿದಾಗ ಸತ್ಯದ ಅಥವಾ ನಡೆದ ಪ್ರಸಂಗದ ಸ್ಥೂಲ ರೂಪವೊಂದು ಗೋಚರವಾಗುತ್ತದೆಯೇ ಹೊರತು, ಜನಪದ ಗೀತೆ ನಿರೂಪಿಸುವ ಎಲ್ಲಾ ವಿಚಾರಗಳೂ ಅಲ್ಲಿರುವ ರೀತಿಯಲ್ಲೇ ನಡೆದಿರಲಾರವು ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣ ಜನಪದರು ಅನೇಕ ನಂಬಿಕೆಗಳನ್ನು ಎಷ್ಟೋ ತಲೆಮಾರುಗಳಿಂದ ಉಳಿಸಿಕೊಂಡು ಬಂದಿದ್ದು. ಅವು ನಿಜವಾಗಲಿ ಸುಳ್ಳಾಗಲಿ ಪಾಲಿಸಿಕೊಂಡು ಬರುತ್ತಾರೆ. ತಮ್ಮ ನಡೆನುಡಿಗಳಲ್ಲಿ ಅವುಗಳ ಅಸ್ತಿತ್ವವನ್ನು ಕಾಣುತ್ತಾರೆ. ಈ ಕಾರಣದಿಂದ ಜನಪದ ಗೀತೆ ಏನು ಹೇಳುತ್ತದೋ ಅದೆಲ್ಲ ಸತ್ಯವಲ್ಲ. ಅದರಲ್ಲಿರುವ ಕಾಲಾನುಕಾಲದ ನಂಬಿಕೆ ಉತ್ಪ್ರೇಕ್ಷೆ ಇತ್ಯಾದಿಗಳನ್ನು ತೆಗೆದು ಹಾಕಿದರೆ ಏನು ಉಳಿಯುತ್ತದೆಯೋ ಅದು ಮಾತ್ರ ಸತ್ಯ. ಅದೇ ಇತಿಹಾಸಕ್ಕೆ ಮತ್ತು ಇತಿಹಾಸದ ಕೆಲವು ಗೊಂದಲಗಳನ್ನು ನಿವಾರಿಸುವುದಕ್ಕೆ ಬೇಕಾಗುವ ಮೂಲ ಸಾಮಾಗ್ರಿಯಾಗಿರುತ್ತದೆ.

ಚಾರಿತ್ರಿಕ ಸಂಗತಿಗೆ ಪುರಾಣಾಂಶದ ಮೌಢ್ಯ ಬೆರತುಗೊಂಡು ಮರೆಯಾಗಿದ್ದ ಸತ್ಯವನ್ನು ಸಮಕಾಲೀನತೆಯ ವಾಸ್ತವ ನೆಲೆಗಟ್ಟಿನಲ್ಲಿ 'ಪರಿಶ್ರಮ'ದ ಮೂಲಕ ತೆರೆದಿಡುವ ರೀತಿ ತಲೆದೂಗುವಂತಿದೆ. "ಮಾನವನ ಬದುಕಿನ ಕತೆಯನ್ನೇ ಭಾವನಾತ್ಮಕವಾಗಿ ಸೆರೆಹಿಡಿಯುವ ಜನಪದಗೀತೆಗಳಲ್ಲಿಯ ವಿವರವು ಇತಿಹಾಸದ ಅಧ್ಯಯನಕ್ಕೆ ಪೂರಕ ಸಾಮಗ್ರಿಯಾಗಬಹುದೇ ಹೊರತು ತಾನೇ ಇತಿಹಾಸವಾಗಲಾರದು" ಎನ್ನುವ ಮಾತಿನಲ್ಲಿ ಸಮತೋಲನವಿದೆ. ವಿವೇಕ ಪೂರ್ಣವಾದ ತೀರ್ಪಿದೆ.

'ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಕೆಲವು ಒಗಟು, ಲಾವಣಿ, ಗಾದೆಗಳನ್ನು ಆಧಾರವಾಗಿಟ್ಟುಕೊಂಡು ಗ್ರಾಮೀಣ ಸಮಾಜದಲ್ಲಿ ಇದ್ದ/ಇರುವ ನಂಬಿಕೆಗಳು ದಬ್ಬಾಳಿಕೆ ಶೋಷಣೆ ಮುಂತಾದವುಗಳನ್ನು ಹೊಸ ಚರ್ಚೆಗೆ ಇಂಬುಗೊಡುವಂತೆ ಮಂಡಿಸುವ ಚೈತನ್ಯ ಅವರದು. 'ಗ್ರಾಮ ದೇವತೆಗಳು' ಒಂದು ಮಹಾಪ್ರಬಂಧಕ್ಕೆ ವಸ್ತುವಾಗುವ ವ್ಯಾಪ್ತಿಯುಳ್ಳದ್ದಾಗಿದೆ. ಗ್ರಾಮದೇವತೆಗಳು ಹೇಗೆ ಜಾತಿ ಮತ್ತು ವರ್ಗಗಳ ತಾರತಮ್ಯಕ್ಕೆ ಸಾಕ್ಷಿಯಾಗಿವೆ ಎಂಬ ಅಂಶ ಭಾರೀ ಸ್ವಾರಸ್ಯಕರವಾಗಿದ್ದು, ಇನ್ನೂ ವ್ಯಾಪಕ ಚರ್ಚೆಯನ್ನು ಅಪೇಕ್ಷಿಸುತ್ತದೆ. 'ಅಪರಾದ ಮತ್ತು ಶಿಕ್ಷೆ' ಒಂದು ಪರಿಚಯಾತ್ಮಕ ಲೇಖನ.

ಸಮಕಾಲೀನ ಅಥವಾ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಆಸಕ್ತರಾದ ಹೊಸ ಪೀಳಿಗೆಯ ಲೇಖಕರು/ವಿಮರ್ಶಕರು ಹಳೆಗನ್ನಡ ಮತ್ತು ನಡುಗನ್ನಡ ಕೃತಿಗಳನ್ನು ವಿಮರ್ಶೆ ಮಾಡುವತ್ತ ಅಷ್ಟಾಗಿ

ಸಿದ್ಧತೆಯನ್ನು ಮಾಡಿಕೊಳ್ಳುತ್ತಿಲ್ಲವಲ್ಲ ಎಂಬ ನನ್ನ ಕೊರಗಿಗೆ ಕೊಂಚ ಅಪವಾದವಾಗಿದ್ದಾರೆ. ಜಿ.ಆರ್.ತಿಪ್ಪೇಸ್ವಾಮಿ 'ಧರ್ಮಾಮೃತ ನೂತನ ಅಂಶಗಳು' ಎಂಬ ಲೇಖನದಲ್ಲಿ ನಯಸೇನನ ಕಾವ್ಯ ಮೂಲಭೂತವಾಗಿ ಧಾರ್ಮಿಕ ಕೃತಿಯಾಗಿದ್ದರೂ ಅದು ಹೇಗೆ ಎಲ್ಲ ವರ್ಗಗಳ ವಾಚಕರನ್ನು ಸಂತುಷ್ಟಿಗೊಳಿಸುವಲ್ಲಿ ಯಶಸ್ವಿಯಾಗುತ್ತದೆ ಎಂಬುದನ್ನು ಮೂಲಕೃತಿಯ ನಿಕಟ ಪರಿಚಯದಿಂದ ಸೂಕ್ತ ಪದ್ಯಗಳನ್ನು ಉದ್ಧರಿಸುವ ರೀತಿಯಿಂದ ತಮ್ಮ ವಿಚಾರಗಳನ್ನು ಪುಷ್ಟಿಕರಿಸುತ್ತಾರೆ. ಭವಾವಳಿ ಮತೀಯ ವಿಧಿ ವಿಷೇಧಗಳೇ ಮುಂತಾದ ಥಿಯಾಲಜಿಯ ಕಗ್ಗಂಟನ್ನು ತೊರದು ಕಥೆಗಳ ಮುಖಾಂತರ ಧರ್ಮವನ್ನು ನಯಸೇನ ಹೇಳುವುದನ್ನು ನೋಡಿದರೆ ಅವನದು ಹೆಚ್ಚಾಗಿ 'ಸೆಕ್ಯೂಲರ್' ದೃಷ್ಟಿಯೆಂದು ನನಗನ್ನಿಸುತ್ತದೆ. ಮನುಷ್ಯ ಒಳ್ಳೆಯವನಾಗಿ ನೆಮ್ಮದಿಯ ಬಾಳು ನಡೆಸುವಂತಾಗಬೇಕೆಂದು ನಯಸೇನನ ಹೃದಯ ತುಡಿಯತ್ತದೆ. ಅವನು ನಿಜವಾದ ಸನ್ಯಾಸಿಯಾದುದರಿಂದಲೇ ಮನುಷ್ಯನ ಬಗ್ಗೆ ಉದಾರವಾಗಿ ಆತ್ಮೀಯವಾಗಿ ಚಿಂತಿಸುತ್ತಾನೆ. ಆದ್ದರಿಂದಲೇ "ಈತನ ಕಾವ್ಯದಲ್ಲಿ ಕಂಡುಬರುವ ಜನರ ರೀತಿ–ನೀತಿ ಕೌಟುಂಬಿಕ ಚಿತ್ರಣ ವ್ಯಾಪಾರ ಬೇರೆ ಬೇರೆ ಜಾತಿಗಳ ವಿವರ ಕಸುಬುಗಳು ಆಡಳಿತ ವರ್ಗದ ವಿವರ ಮಂತ್ರ ತಂತ್ರ ಐಂದ್ರಜಾಲಿಕ ವಿದ್ಯೆ ನಂಬಿಕೆ ಆಚರಣೆ ಪಶು ಪಕ್ಷಿ ಪ್ರಾಣಿಗಳ ವಿವರ ಇವೆಲ್ಲವೂಗಳನ್ನು ಗಮನಿಸಿದರ ನಯಸೇನಗಿರುವಷ್ಟು ಅಪಾರವಾದ ಲೋಕಾನುಭವ ಕನ್ನಡ ಕವಿಗಳಲ್ಲಿ ಅನೇಕಗಿಲ್ಲವೆಂದೇ ಹೇಳಬಹುದು ಎಂಬ ತಿಪ್ಪೇಸ್ವಾಮಿಯವರ ಅಭಿಪ್ರಾಯ ಒಪ್ಪುವಂತಿದೆ. ಹೀಗೆ ವಿಮರ್ಶಿಸುವಾಗ ಅವರ ಲಕ್ಷ್ಯ ಸಾಹಿತ್ಯದ ಸೊಗಸುಗಳನ್ನು ವಿವರಿಸುವ ಕಡೆಗೆ ಸೂಕ್ಷ್ಮವಾಗಿ ವಾಲುತ್ತದೆ.

ಬಂಡಾಯ ಸಾಹಿತ್ಯ ಚಳುವಳಿಯ ಒಬ್ಬ ಮುಖ್ಯ ಲೇಖಕರಾದ ಬರಗೂರು ರಾಮಚಂದ್ರಪ್ಪನವರ ಎರಡು ಕಾದಂಬರಿಗಳನ್ನು 'ಭರತ ನಗರಿ' ಮತ್ತು ಬೆಂಕಿ ಕುರಿತು ತಿಪ್ಪೇಸ್ವಾಮಿ ಬರೆದಿದ್ದಾರೆ. ಈ ಲೇಖನದಲ್ಲಿ ತಿಪ್ಪೇಸ್ವಾಮಿ ಅವರ ವಿಮರ್ಶಾ ಪ್ರಜ್ಞೆ ಮೆಚ್ಚಿಕೆಯ ಧೋರಣೆಯಿಂದ ಪ್ರೇರಿತವಾಗಿದ್ದರೂ ಕಾದಂಬರಿಗಳ ಕಲಾಂಶಗಳನ್ನು ಬೆಳಕು ಮಾಡಲು ಸಫಲ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡುವುದು ಗೋಚರಿಸುತ್ತದೆ.

'ಚೆರಿತೋಟ'ದಲ್ಲಿ ಅಚಿಟನ್ ಚೆಕಾವನ ಪ್ರಸಿದ್ಧ ನಾಟಕದ ಸ್ಥೂಲ ಕಥಾ ಪರಿಚಯವಿದೆ. ಈ ಅನುವಾದದಿಂದ ಕನ್ನಡ ನಾಟಕಕ್ಕೆ ಆದ ಲಾಭವನ್ನು ಕುರಿತು ಚರ್ಚಿಸಿದ್ದರೆ ಬೆಳೆಯುಳ್ಳ ಲೇಖನವಾಗುತ್ತಿತ್ತು. ತಾವು ಮಾಡಿದ ಎರಡು ಉಪಯುಕ್ತ ಸಂದರ್ಶನಗಳನ್ನು ತಿಪ್ಪೇಸ್ವಾಮಿ ಇಲ್ಲಿ ಸೇರಿಸಿದ್ದಾರೆ. ಜ್ಯೋತಿಷ್ಯ ಮತ್ತು ನವಗ್ರಹಗಳು ಅವೈಜ್ಞಾನಿಕ ಎಂಬ ವಿಚಾರ ನಾಡಿನ ಜನರ ತಲೆಗೆ ಮುಟ್ಟಬೇಕಾಗಿದೆ. ಬಂಡಾಯ ಮತ್ತು ದಲಿತ ಸಾಹಿತ್ಯ ಚಳುವಳಿಗಳೆರಡಲ್ಲೂ ಒಬ್ಬ ಪ್ರಮುಖ ಕವಿಯಾದ ಸಿದ್ಧಲಿಂಗಯ್ಯನವರ ಸಂದರ್ಶನದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ತಾತ್ವಿಕವಾಗಿ ಸರಿಯಾಗಿವೆ ಎನ್ನಬಹುದು. ಅವರು ಕನ್ನಡ ಸಾಹಿತ್ಯ ಬಿಟ್ಟಿರುವ ಬಂಡಾಯದ ಬೇರುಗಳನ್ನು ಬಲ್ಲವರು "ಸೌಂದರ್ಯವನ್ನು ವಿರೋಧಿಸುವವರು ಸೌಂದರ್ಯವನ್ನು ಸೃಷ್ಟಿಸುವುದು ಸಾಧ್ಯವೇ ಇಲ್ಲ" ಎಂಬ ಅವರ ಖಚಿತ ಮತು ಮಾನನೀಯವಾಗಿದೆ. ಈ ದಿಸೆಯಲ್ಲಿ ಅವರ ಕಾವ್ಯ ಸಾಧಿಸಬೇಕಾದ್ದು ಬಹಳವಿವೆ. ತಿಪ್ಪೇಸ್ವಾಮಿ ಅವರ ಬರವಣಿಗೆಯಲ್ಲಿ ಪುನರುಕ್ತಿಗಳ ದೋಷ ಕಲೆಹಾಕುತ್ತದೆ. ಅದನ್ನು ಅವರು ಎಚ್ಚರಿಕೆಯಿಂದ ನಿವಾರಿಸಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಇದು ಕೇವಲ ಕನ್ನಡ ವಿಮರ್ಶಕರ ವಿಷಯದಲ್ಲಿ ನಿಜವಿರಬಹುದು. ಆದರೆ ಶುಷ್ಕವಾಗುದಂತೆ ಬರೆಯುವ ಒಳ್ಳೆಯ ವಿಮರ್ಶಕರ ಸಾಲಿಗೆ ತಿಪ್ಪೇಸ್ವಾಮಿ ಸೇರುತ್ತಾರೆ. ಅವರದು ತಿಳಿಯಾದ ಸುಂದರ ಕನ್ನಡ ಭಾಷಾ ಬಳಕೆಯಲ್ಲಿ ಕಸರತ್ತು ಮಾಡುವುದರ ಪೈಕಿಗೆ ಅವರು ಸೇರಿದವರಲ್ಲ. ಸವಕಲು ಮಾತುಗಳನ್ನು ನುಡಿಗಟ್ಟುಗಳನ್ನು ಅವರು ಜಾಗರೂಕತೆಯಿಂದ ನಿವಾರಿಸಿಕೊಳ್ಳುತ್ತಾರೆ. ಅವರು ಮೊದಲೇ ಯೋಚಿಸಿ ಬರಹ ಪ್ರಾರಂಭಿಸುವುದರಿಂದ ಬರೆಯುವಾಗ ಆಲೋಚಿಸುವವರ ಗೊಂದಲಗಳಾಗಲಿ, ಅಸ್ಪಷ್ಟತೆಗಳಾಗಲಿ ಅವರಲ್ಲಿ ಕಾಣವುದಿಲ್ಲ.

ಸ್ವಂತಿಕೆ ಇರುವ ಗಟ್ಟಿಯಾದ್ದನ್ನು ಸಾಧಿಸಬೇಕೆಂದು ಛಲವುಳ್ಳ ಗೆಳೆಯ ತಿಪ್ಪೇಸ್ವಾಮಿ ಅವರಿಂದ ಇನ್ನೂ ಮಹತ್ವಪೂರ್ಣ ವಿಮರ್ಶೆ ಬರುತ್ತದೆ. ಕನ್ನಡ ವಿಮರ್ಶಾ ಸಂಪತ್ತು ಸಂವರ್ಧಿಸುತ್ತದೆ ಎಂಬ ಪ್ರಬಲ ಭರವಸೆ ನನಗಿದೆ.

**ಅಭಿಮುಖ**

ಕನ್ನಡ ಸಾಹಿತ್ಯದ ಪ್ರಮುಖ ವಿಮರ್ಶಕರಲ್ಲಿ ಡಾ.ಜಿ.ಆರ್.ತಿಪ್ಪೇಸ್ವಾಮಿಯವರು ಒಬ್ಬರು. ಸೂಕ್ಷ್ಮ ಸ್ವಭಾವದ ಜಿ.ಆರ್.ತಿಪ್ಪೇಸ್ವಾಮಿಯವರು ಕವಿಯಾಗಿಯೂ ವಿಮರ್ಶಕರಾಗಿಯೂ, ಸಂಶೋಧಕರಾಗಿಯೂ, ಉತ್ತಮ ಸಂಪಾದಕರಾಗಿಯೂ, ಒಳ್ಳೆಯ ಅಧ್ಯಾಪಕರಾಗಿಯೂ ಹಾಗೂ ಜನಪದ ತಜ್ಞರಾಗಿಯೂ ಕನ್ನಡ ಸಾಹಿತ್ಯಲೋಕಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಇವರಲ್ಲಿ ಕಾಣುವ ವಿಶಿಷ್ಟವಾದ ಗುಣವೆಂದು ಮುಂಚೂಣಿಗೆ ಬರದಿದ್ದ ಲೇಖಕರನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸುವುದು. ಸಾಹಿತ್ಯ ಕೃತಿಗಳ ವಿಮರ್ಶೆಯಲ್ಲಿ ಗುಣ ಮತ್ತು ಅವಗುಣಗಳನ್ನು ಅರ್ಥವತ್ತಾಗಿ ಓದುಗರಿಗೆ ಪರಿಚಯಿಸುವುದು ಹಾಗೂ ಸಂಶೋಧನೆಯಲ್ಲಿ ಹೊಸದಾದ ಆಲೋಚನೆಗೆ ಎಡೆಮಾಡಿಕೊಡುವುದು ಆಗಿದೆ.

ಶ್ರೀಯುತರು ಸಾಹಿತ್ಯದ ಹಲವಾರು ಕ್ಷೇತ್ರದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಪರಿಷತ್ತಿನ ಜಾನಪದ ವಿಭಾಗದ ಮುಖ್ಯಸ್ಥರಾಗಿದ್ದಲ್ಲದೆ, ಡಾ.ಚಂದ್ರಶೇಖರ ಕಂಬಾರರ ಸಂಪಾದಕತ್ವದಲ್ಲಿ ಹೊರಬಂದದ್ದು ಕನ್ನಡ ಜಾನಪದ ವಿಶ್ವಕೋಶ ಯೋಜನೆಯ ಎರಡು ಸಂಪುಟಗಳಿಗೆ ಸಹಾಯಕ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. 1995ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 1994ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಆದೇಶದಂತೆ ಕೋಲಾರ ಜಿಲ್ಲೆಯ ಗ್ರಾಮದೇವತೆಗಳು ಮತ್ತು ಜನಪದ ಕಲೆಗಳನ್ನು ಕುರಿತ ಮಾಹಿತಿಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಕನ್ನಡ ಪ್ರಭ ಮತ್ತು ಪ್ರಜಾವಾಣೆಯ ಪತ್ರಿಕೆಯ ಪುಸ್ತಕ ವಿಮರ್ಶೆಯಲ್ಲಿ ಪ್ರಧಾನವಾದ ಪಾತ್ರವಹಿಸಿದ್ದಾರೆ. ಹೀಗೆ ಸಾಹಿತ್ಯದ ವಿವಿಧ ಮಜಲುಗಳಲ್ಲಿ ಇವರು ಕಾರ್ಯನಿರ್ವಹಿಸಿದ್ದಾರೆ.

ಜಿ.ಆರ್.ತಿಪ್ಪೇಸ್ವಾಮಿಯವರು ಗ್ರಾಮೀಣ ಸಂಸ್ಕೃತಿಯ ನೆಲೆಯಿಂದ ಬಂದ ನಗರದಲ್ಲಿ ತಮ್ಮ ವಾಸ್ತವ್ಯವನ್ನು ಹೂಡಿದರೂ ಸಹ ಗ್ರಾಮೀಣ ಸಂಸ್ಕೃತಿಯ ಅನುಭವಗಳ ಅವರಲ್ಲಿ ದಟ್ಟವಾಗಿರುವುದನ್ನು ಅವರ ಬರಹದಲ್ಲಿ ಗುರುತಿಸಬಹುದು. ಆಧುನಿಕ ಕನ್ನಡ ಸಾಹಿತ್ಯದ ಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಈ ಎಲ್ಲಾ ಘಟ್ಟಗಳಲ್ಲಿನ ಕವಿಗಳನ್ನು ಅವರ ಕೃತಿಗಳನ್ನು ಚರ್ಚೆಗೆ ಎತ್ತಿಕೊಂಡಿರುವುದು ಅಲ್ಲದೆ ಪ್ರಾಚೀನ ಕಾಲದ ಸಾಹಿತ್ಯ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಸಹ

ಗಣನೆಗೆ ತೆಗೆದುಕೊಂಡು ವಿಮರ್ಶಿಸಿರುವ ರೀತಿಯನ್ನು ಅವಲೋಕಿಸಿದರೆ ಜಿ.ಆರ್.ತಿಪ್ಪೇಸ್ವಾಮಿಯವರಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿದ್ದ ವಿಸ್ತೃತವಾದ ಜ್ಞಾನ ಓದುಗರಿಗೆ ಅರಿವಾಗುತ್ತದೆ.

ಅಕ್ಷರ ವಂಚಿತ ಕುಟುಂಬದಿಂದ ಬಂದ ಜಿ.ಆರ್.ತಿಪ್ಪೇಸ್ವಾಮಿಯವರು ಕನ್ನಡ ಸಾಹಿತ್ಯಲೋಕಕ್ಕೆ ಅವರು ನೀಡಿದ ಸಂಪಾದನೆ ಮತ್ತು ವಿಮರ್ಶೆ ಕೃತಿಗಳನ್ನು ಕಂಡರೆ ನಿಜಕ್ಕೂ ಅವರು ಸಾಹಿತ್ಯ ಲೋಕದಲ್ಲಿ ಬೆಳೆದ ರೀತಿ ಪ್ರತಿಯೊಬ್ಬರಿಗೂ ಅಚ್ಚರಿಯನ್ನುಂಟು ಮಾಡುತ್ತದೆ. ಹೊಸದಾಗಿ ಸಂಶೋಧನಾ ಕ್ಷೇತ್ರ ಪ್ರವೇಶಿಸುವ ಸಂಶೋಧಕರಿಗೆ ಅವರ ಕೃತಿಗಳು ದಾರಿ ದೀಪವಾಗಿರುವುದನ್ನು ಕಾಣಬಹುದು. 'ಯಾರು ಮುಖ್ಯರಲ್ಲ ಯಾರು ಅಮುಖ್ಯರು' ಎಂದು ಹೇಳುವ ಕುವೆಂಪುರವರ ಮಾತಿನಂತೆ ಜಿ.ಆರ್.ತಿಪ್ಪೇಸ್ವಾಮಿಯವರು ಪ್ರಸಿದ್ಧ ಲೇಖಕರ ಕೃತಿಯನ್ನು ವಿಮರ್ಶೆಗೆ ಒಳಪಡಿಸಿರುವ ಹಾಗೆ ಈಗ ತಾನೆ ಸಾಹಿತ್ಯಲೋಕಕ್ಕೆ ಪಾದಾರ್ಪಣೆ ಮಾಡುತ್ತಿರುವ ಯುವ ಲೇಖಕರ ಕೃತಿಗಳನ್ನು ವಿಮರ್ಶೆಗೆ ಒಳಪಡಿಸಿ ಅವರು ಸಾಹಿತ್ಯ ಲೋಕದಲ್ಲಿ ಬೆಳೆಯುವ ಹಾಗೆ ಪ್ರೋತ್ಸಾಯಿಸಿದ್ದಾರೆ.

ಜಿ.ಆರ್.ತಿಪ್ಪೇಸ್ವಾಮಿಯವರು ಉತ್ತಮ ಅಧ್ಯಾಪಕರಾಗಿದ್ದು, ಸದಾ ವಿದ್ಯಾರ್ಥಿಗಳ ಜೊತೆಗೆ ಸಂಶೋಧಕರ ಜೊತೆಗೆ ತಮ್ಮ ಸಹಪಾಠಿಗಳ ಜೊತೆಗೆ ವಿಷಯಗಳನ್ನು ತೌಲನಿಕವಾಗಿ ಹಾಗೂ ಹಾಸ್ಯದ ರೀತಿಯಲ್ಲಿ ಚರ್ಚಿಸುವ ಮೂಲಕ ನಗುವಿನ ಹೊನಲು ಹರಿಯುವಂತೆಯೇ ಮಾಡುತ್ತಾರೆ. ಇವರ ಬರವಣಿಗೆಯಲ್ಲಿ ಕನ್ನಡ ಪದಗಳ ಜೊತೆಗೆ ಸಾಂದರ್ಭಿಕವಾಗಿ ಸೇರಿಸುವ ಇಂಗ್ಲೀಷ ಪದಗಳ ಶೈಲಿಯೂ ಓದುಗರ ಗಮನವನ್ನು ವಿಶಿಷ್ಟವಾದ ರೀತಿಯಲ್ಲಿ ಸೆಳೆಯುತ್ತದೆ. ಜಿ.ಆರ್.ತಿಪ್ಪೇಸ್ವಾಮಿಯವರ ಸಂಶೋಧನಾತ್ಮಕ ಲೇಖನಗಳ ಸಂಕಲನವಾದ 'ಅಭಿಮುಖ' ಕೃತಿಯ ಹತ್ತು ಲೇಖನಗಳನ್ನು ಒಳಗೊಂಡಿದ್ದು, ಪ್ರತಿಯೊಂದು ಲೇಖನದಲ್ಲಿಯೂ ಅವರ ಸೃಜನಶೀಲವಾದ ಆಲೋಚನೆಯನ್ನು ಕಾಣಬಹುದು.

ಮಧ್ಯಕಾಲೀನ ಸಾಹಿತ್ಯದಲ್ಲಿ ಬದಲಾದ ಮನುಷ್ಯನ ಪರಿಕಲ್ಪನೆ ಎಂಬ ಲೇಖನದಲ್ಲಿ ಜಿ.ಆರ್.ತಿಪ್ಪೇಸ್ವಾಮಿಯವರು ಗುರುತಿಸಿದ್ದಾರೆ. ಬಸವಣ್ಣನ ವಚನಗಳಲ್ಲಿ ಮನುಷ್ಯ ಈ ಲೋಕದ ಬದುಕನ್ನು ಪ್ರೀತಿಸಿದವನು ಇಲ್ಲಿಯೇ ನೆಲೆಯೂರಬೇಕೆಂದು ಬಯಸಿದವನು. ಅಕ್ಕಮಹಾದೇವಿಯ ವಚನಗಳಲ್ಲಿ ತಾನು ಭಾವಿಸಿದ ಮಾನವ ಪ್ರೇಮ ಸಂಬಂಧವನ್ನು ಇನ್ನೊಂದು ವಾತಾವರಣದಲ್ಲಿ ಪತ್ತೆ ಹಚ್ಚುವ ಪ್ರಯತ್ನ ಕಂಡುಬರುತ್ತದೆ. ಆದರೆ ಅಲ್ಲಮನು ಮನುಷ್ಯ ಲೌಕಿಕದಿಂದ ಅತೀತನಾಗಬೇಕೆಂದು ಬಯಸಿದರು.

ಈ ಲೇಖನದಲ್ಲಿ ಜಿ.ಆರ್.ತಿಪ್ಪೇಸ್ವಾಮಿಯವರು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಕವಿಗಳಾದ ಹರಿಹರ ಮತ್ತು ರಾಘವಾಂಕರು ತಮ್ಮ ಕಾವ್ಯದ ರಚನೆಯಲ್ಲಿ ಹಿಂದಿನ ಕನ್ನಡ ಕಾವ್ಯಗಳಿಗಿಂತ ಹೇಗೆ ಭಿನ್ನವಾಗಿ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ ಎಂಬುದನ್ನ ತಿಳಿಸಿದ್ದಾರೆ. ಹರಿಹರ ಪ್ರತಿಷ್ಠಿತರಿಗೆ ಮೀಸಲಾಗಿದ್ದ ಕನ್ನಡ ಕಾವ್ಯವನ್ನು ತನ್ನ ಕಾವ್ಯ ಸಂದರ್ಭದಲ್ಲಿ ಜನ ಸಾಮಾನ್ಯರಿಗೆ ಮೀಸಲಿಟ್ಟ ಕಿನ್ನರಿ ಬೊಮ್ಮಯ್ಯ ಮತ್ತು ಬಸವಣ್ಣನಿಗೂ ಈರುಳ್ಳಿ ವಾಸನೆಯಿಂದ ಸಂಘರ್ಷ ನಡೆದಾಗ ಇಲ್ಲಿ ಹರಿಹರ ಮೇಲ್ವರ್ಗದ ದಬ್ಬಾಳಿಕೆಗೆ ತುತ್ತಾಗಿದ್ದ ಕೆಳವರ್ಗದವರಿಗೆ ಅಂತಿಮವಾಗಿ ಜಯವನ್ನು ತಂದುಕೊಡುತ್ತಾನೆ. ಪ್ರಧಾನ ಮತ್ತು ಅಧೀನ ಸಂಸ್ಕೃತಿಗಳ ತಿಕ್ಕಾಟದಲ್ಲಿ ಸಾಮಾನ್ಯ ಮನುಷ್ಯ ಯಶಸ್ಸನ್ನು ಪಡೆದು ತನ್ನ ವ್ಯಕ್ತಿತ್ವಕ್ಕೆ

ಸಂಪೂರ್ಣವಾಗಿ ಘನತೆಯನ್ನು ತಂದುಕೊಳ್ಳುತ್ತಾನೆ. ಹಾಗೆಯೇ ಮನುಷ್ಯ ಮನುಷ್ಯನಾಗಿಯೇ ಇದ್ದುಕೊಂಡು ಶ್ರೇಷ್ಠವಾದ ಆದರ್ಶವೊಂದರ ಸಾಧನೆಯಿಂದ ಯಾವ ಹಂತವನ್ನು ಮುಟ್ಟಬಲ್ಲ ಎಂಬುದನ್ನು ಕವಿ ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ತೋರಿಸಿದ್ದಾನೆ.

ಹೀಗೆ ಜಿ.ಆರ್.ತಿಪ್ಪೇಸ್ವಾಮಿಯವರು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿ ಕಂಡು ಬರುವ ವಚನಕಾರರು ಮತ್ತು ದಾಸರಗಳಲ್ಲಿ ಕಂಡುಬರುವ ವೈಶಿಷ್ಟ್ಯತೆಯನ್ನು ತಿಳಿಸುತ್ತಾರೆ. ಹಾಗೆಯೇ ಸರ್ವಜ್ಞನ ತ್ರಿಪದಿಗಳಲ್ಲಿನ ವಿಶಾಲ ಮನಸ್ಸಿನ ಸಹೃದಯ ಮನುಷ್ಯನು ಗೋಚರವಾಗುವುದನ್ನು ತಿಳಿಸುತ್ತಾರೆ. ಅಲ್ಲದೆ ಪ್ರಾಚೀನ ಕಾಲದ ಸಾಹಿತ್ಯ ಕೃತಿಗಳಿಗಿಂತ ಮಧ್ಯಕಾಲೀನ ಸಾಹಿತ್ಯ ಕೃತಿಗಳು ಹೇಗೆ ಮನುಷತ್ವದ ಬದಲಾವಣೆಯನ್ನು ಬಯಸುತ್ತಿದ್ದವು ಎಂಬುದನ್ನು ರತ್ನಾಕವರರ್ಣಿಯ 'ಭರತೇಶ ವೈಭವ' ಕಾವ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಇವರು ಮಾಡಿದ್ದಾರೆ. ಇಲ್ಲಿ ಈ ಕಾವ್ಯದ ಜೊತೆಗೆ ಪ್ರಾಚೀನ ಕಾವ್ಯಗಳ ತೌಲನಿಕ ಚರ್ಚೆ ಮಾಡಿದ್ದಾರೆ.

ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿನ ಭರತ ಚಕ್ರವರ್ತಿಯಾಗಿದ್ದರೂ ಸಾಮಾನ್ಯ ಮನುಷ್ಯನಂತೆ ಆತನ ನಡವಳಿಕೆಗಳಿದ್ದು, ಅವೆಲ್ಲ ಹೆಚ್ಚು ಲೌಕಿಕವಾಗಿದೆ. ಗೋಪಿಕೆಯರೊಂದಿಗಿನ ಕೃಷ್ಣ ಸಂಪೂರ್ಣ ದೈವವಾಗಿದ್ದರೆ, 96 ಸಾವಿರ ಸ್ತ್ರೀಯರೊಂದಿಗಿನ ಭರತ ಸಂಪೂರ್ಣ ಮಾನವನಾಗಿದ್ದಾನೆ. ಪಂಪ ಆದಿಪುರಾಣದ ಭರತ ಭೋಗಿಯಾಗಿದ್ದರೂ ಪರಾಕ್ರಮಿಯಾಗಿದ್ದು ತೇಜಸ್ವಿನಿಂದ ಕೂಡಿದವನಾಗಿದ್ದಾನೆ. ಆದರೆ ರತ್ನಾಕರವರ್ಣಿಯ ಭರತ ಭೋಗಿಯಾಗಿದ್ದರೂ ಶೂರನ ಲಕ್ಷಣಗಳಿಲ್ಲದೆ ಸಾಮಾನ್ಯ ಮನುಷ್ಯನಂತೆ ಕಂಡು ಬರುತ್ತಾನೆ. ಈ ಬದಲಾವಣೆಗೆ ಮಧ್ಯಕಾಲೀನ ಇತಿಹಾಸ ಕಾರಣವಿರಬಹುದು ಎಂದು ಅಭಿಪ್ರಾಯ ಪಡುವುದು ಸಮಂಜಸವಾಗಿದೆ. ಮದ್ಯಕಾಲೀನ ಸಾಹಿತ್ಯದಲ್ಲಿ ಬದಲಾದ ಮನಷ್ಯನ ಪರಿಕಲ್ಪನೆಯನ್ನು ಸಮರ್ಥವಾಗಿ ಕಟ್ಟಿಕೊಡುವುದಕ್ಕೆ ಜಿ.ಆರ್.ತಿಪ್ಪೇಸ್ವಾಮಿಯವರು ಆ ಕಾಲಘಟ್ಟದಲ್ಲಿ ಕಂಡಬರುವ ಪ್ರಧಾನ ಕವಿಗಳಾದ ಕುಮಾರವ್ಯಾಸ ಸಂಚಿ ಹೊನ್ನಮ್ಮ ಹಾಗೂ ಆಧುನಿಕರಲ್ಲಿ ಮೊದಲಿಗರಾದ ಮುದ್ದಣ್ಣನವರ ಕಾವ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಿರುವುದನ್ನ ಕಾಣಬಹುದು.

'ನವ್ಯ ಸಾಹಿತ್ಯ ಪರಕೀಯ ಪ್ರಜ್ಞೆ, ವ್ಯಕ್ತಿನೆಲೆ ಮತ್ತು ನೋವು ಎಂಬ ಲೇಖನದಲ್ಲಿ ಜಿ.ಆರ್.ತಿಪ್ಪೇಸ್ವಾಮಿಯವರು ನವ್ಯ ಸಾಹಿತ್ಯದ ಲಕ್ಷಣಗಳಾದ ಪರಕೀಯತೆ ಮತ್ತು ಅಸಂಗತತೆಯನ್ನು ತಿಳಿಸುವುದರೊಂದಿಗೆ ಸಮಾಜದೊಂದಗಿನ ಸಂಬಂಧವನ್ನು ಕಡಿದುಕೊಂಡ ನವ್ಯರು ಪರಕೀಯರಾಗಿ ಅನಾಥ ಪ್ರಜ್ಞರಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಅಲ್ಲದೆ ನವ್ಯ ಕಾಲದ ಪರಕೀಯತೆಯಲ್ಲಿ ವ್ಯಕ್ತಿಯ ನಿರಾಶೆಯೇ ನೋವೆ ಪ್ರಧಾನ ಆಶಯವಾಗಿತ್ತೆಂಬುದನ್ನು ನವ್ಯ ಕಾಲಘಟ್ಟದಲ್ಲಿ ಬಂದಂತಹ ಕಾವ್ಯ ಕಾದಂಬರಿ ಕತೆ ಮುಂತಾದ ಪ್ರಕಾರಗಳಲ್ಲಿ ಬಂದ ಕೃತಿಗಳಾದ ಅಡಿಗರ 'ಭೂಮಿಗೀತ' ಶಾಂತಿನಾಥ ದೇಸಾಯಿಯವರ 'ಮುಕ್ತಿ' ಮತ್ತು 'ವಿಕ್ಷೇಪ' ಗಿರಿಯವರ 'ಗತಿಸ್ಥಿತಿ' ಅನಂತಮೂರ್ತಿಯವರ 'ಸಂಸ್ಕಾರ' ಜಿ.ಎಸ್.ಸದಾಶಿವರವರ 'ಕಾರಣ ಮುಂತಾದವುಗಳನ್ನು ವಿಮರ್ಶೆಗೆ ಒಳಪಡಿಸಿರುವುದನ್ನು ಕಾಣಬಹುದು..

ನವೋದಯ ಮತ್ತು ಪ್ರಗತಿಶೀಲ ಲೇಖಕರ ಸಾಹಿತ್ಯದ ಆಶಯಗಳನ್ನು ಟೀಕಿಸುತ್ತಾ ಬಂದ ನವ್ಯ ಲೇಖಕರು ವೈಯಕ್ತಿಕ ಬದುಕು ಮತ್ತು ಆ ಬಗೆಗಿನ ಚಿಂತನೆಗೆ ಹೆಚ್ಚು ಆದ್ಯತೆ ನೀಡಿದ್ದನ್ನು ಈ ಲೇಖನದಲ್ಲಿ

ಇವರು ಗುರುತಿಸಿದ್ದಾರೆ. 'ಪ್ರಗತಿಶೀಲ ಕನ್ನಡ ಸಣ್ಣಕತೆಗಳು' ಎಂಬ ಲೇಖನದಲ್ಲಿ ಜಿ.ಆರ್.ತಿಪ್ಪೇಸ್ವಾಮಿಯವರು ಪ್ರಗತಿಶೀಲ ಸಾಹಿತ್ಯ ಬೆಳೆದು ಬಂದ ಬಗೆ ಅದರ ಪ್ರಮುಖ ಗುರು ಏನಾಗಿತ್ತು? ಆರಂಭದಲ್ಲಿ ಪಾಶ್ಚಾತ್ಯ ಭಾಷೆಯ ಕಥೆಗಳ ಅನುವಾದದಿಂದ ಬೆಳೆದು ಬಂದರೂ ಸಹ ಮುಂದೆ ಇದು ತನ್ನ ಸ್ವಂತಿಕೆಯನ್ನು ಹೇಗೆ ರೂಢಿಸಿಕೊಂಡಿತು. ಅಲ್ಲದೆ ಪ್ರಗತಿಶೀಲರ ಕಥೆಗಳಲ್ಲಿ ಕಾಣುವ ಉದ್ವೇಗ ಅಸಹನೆ ರೊಚ್ಚು ಅತಿರೇಕ ರಭಸಗಳನ್ನು ಆ ಕಾಲಘಟ್ಟದಲ್ಲಿ ಬರೆದ ಕತೆಗಾರ ಕೊರಡ್ಕಲರ್ ಶ್ರೀನಿವಾಸರಾಯರ "ಧನಿಯರ ಸತ್ಯನಾರಾಯಣ' ಅನಕೃರವರ 'ಕಿಡಿ' 'ಕಾಮನ ಸೋಲು' 'ಪಾಪಪುಣ್ಯ' ತರಾಸುರವರ 'ತೊಟ್ಟಿಲು ತೂಗಿತು. ರೂಪತಿ ನಿರಂಜನ 'ನಾಸ್ತಿಕಕೊಟ್ಟ ದೇವರು' ಒಂಟಿ ನಕ್ಷತ್ರ ನಕ್ಕಿತು, ವಾರದ ಹುಡುಗಿ' ಬಸವರಾಜ ಕಟ್ಟಿಮನಿಯವರ 'ಕಾರವಾನ್' 'ಕೊಲೆಪಾತಕ' ಪರಾಜಿತ ಕೊ.ಚನ್ನಬಸಪ್ಪನವರ 'ಗಡಿಪಾರು' ಹಾಗೂ 'ನಮ್ಮೂರಿನ ದೀಪ' ಮುಂತಾದ ಕತೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

**ಕನ್ನಡ ದಲಿತ ಸಾಹಿತ್ಯದ ನೆಲೆಗಳು**

ಜಿ. ಆರ್.ತಿಪ್ಪೇಸ್ವಾಮಿ ಅವರು 'ಬರ'ದ ನಾಡೆಂದೇ ಗುರುತಿಸಿಕೊಂಡು ತುಮಕೂರು ಜಿಲ್ಲೆ ಪಾವಗಡ ತಾಲೂಕಿನಲ್ಲಿ ಹುಟ್ಟಿದವರಾದರೂ ತಮ್ಮ ಪರಿಶ್ರಮದಿಂದ ಇಂದು ಈ ಬಗೆಯ ಬರೆಹದ ಬದುಕನ್ನು ಕಟ್ಟಿಕೊಂಡಿರುವುದು ಸಾಧಾರಣ ಸಂಗತಿಯೇನಲ್ಲ ತಮ್ಮ ಹಿಂದುಳಿಯುವಿಕೆಗೆ ಹತ್ತಾರು ಕಾರಣಗಳನ್ನು ಮುಂದು ಮಾಡುವ ಜನರಿಗೆ ಇವರ ಬದುಕೇ ಒಂದು ಮಾದರಿಯಾಗಿ ನಿಲ್ಲುತ್ತದೆ. ಹಾಗೆಂದು ಇವರು ದುತ್ತನೇ ಎತ್ತರಕ್ಕೆ ಬೆಳೆದು ನಿಂತವರಲ್ಲ ಬದಲಾಗಿ ಹಂತ ಹಂತವಾಗಿ ಬೆಳೆದು ಜೀವನದ ಎಲ್ಲ ಸ್ತರಗಳ ಸತ್ತ್ವವನ್ನು ಹೀರಿ ಸದೃಢಗೊಂಡವರು ವೃತ್ತಿ ಬದುಕಿನಲ್ಲೂ ಅಷ್ಟೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗುವ ಮುನ್ನ ಹಲವು ಸರ್ಕಾರಿ ಖಾಸಗಿ ಕಾಲೇಜುಗಳಲ್ಲಿ ಬೋಧನೆ ಮಾಡಿ ಎಲ್ಲ ಹಂತದ ಭಿನ್ನ ನೆಲೆಯ ವಿದ್ಯಾರ್ಥಿಗಳನ್ನು ಕಂಡವರು ಪಾಠ ಹೇಳಿದವರು.

ಮುಖ್ಯವಾಗಿ ಅವರ ಜೀವನದ ವಿಶಿಷ್ಟತೆಯೆಂದರೆ ಯಾವುದೇ ವಿವಾದಗಳಿಗೆ ಈಡಾಗದೇ ಪಾರದರ್ಶಕವಾದ ಜನಮುಖಿಯಾದ ಜೀವಪರ ಕಾಳಜಿಯಿಂದ ಜೀವಸೆಲೆಯಾಗಿ ಉದ್ದಕ್ಕೂ ಸಾಗಿ ಬಂದಿರುವುದು ಕಿರಿಯರಾಗಲೀ, ವಿಧ್ಯಾರ್ಥಿಗಳಾಗಲಿ ಎಲ್ಲರನ್ನು ಸಮಾನವಾಗಿ ಕಾಣುತ್ತ ಸನ್ಮಾರ್ಗವನ್ನು ತೋರುತ್ತಾ ನಮ್ಮೊಂದಿಗೆ ಬೆಳೆಸುವ ಪರಿ ಅನನ್ಯವಾದುದು. ಎಂತಹದುದೇ ಏರಿಳಿತಗಳು ಜೀವನದಲ್ಲಿ ಎದುರಾದರೂ ಧೈರ್ಯಗೆಡದೇ ಸದಾ ನಗುಮುಖದಿಂದಲೇ ಇರುವ ಬಗೆ ಅವರಿಗೆ ವಿಶಿಷ್ಟವಾಗಿದೆ.

ಬರಹದ ಬದುಕಿನಲ್ಲಿ ಅವರು ವಿಮರ್ಶಕರಾಗಿ ಗುರುತಿಸಿಕೊಂಡರೂ ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅದ್ವಿತೀಯವಾದುದು. ಜೊತೆಗೆ ವ್ಯಕ್ತಿ ಚಿತ್ರಣ ಸಂಪಾದನೆಯ ಕ್ಷೇತ್ರಗಳಲ್ಲೂ ಗಮನಾರ್ಹ ಸಾಧನೆಗೈದಿದ್ದಾರೆ. ಜಾನಪದ ವಿಶ್ವಕೋಶಗಳ ರಚನೆಯಲ್ಲೂ ಅವರದು ಗಣನೀಯ ಪಾತ್ರವಿದೆ. ಇಂತಹ ಸಾಧನೆಗಳ ನಡುವೆಯೂ ಸದ್ದಿರದೆ ಪ್ರಚಾರದ ಗೀಳಿಗೆ ಬೀಳದೆ ಸರಳ ಸಜ್ಜನಿಕೆಯ ವ್ಯಕ್ತಿಯಾಗಿ ಉಳಿದು ಬಿಡುವುದು ಎಲ್ಲರಿಗೂ ಆಗದು ಅರ್ಧ ಶತಕಕ್ಕೂ ಮೀರಿದ ಕೃತಿಗಳ ಕರ್ತೃ ಇವರು. ಆದರೂ ಯಾವುದೇ

ಹಮ್ಮು ಬಿಮ್ಮುಗಳಿಲ್ಲ. ಪ್ರಶಸ್ತಿ ಪುರಸ್ಕಾರಗಳ ಹಿಂದೆ ಬಿದ್ದವರಲ್ಲ, ಕೀರ್ತಿ ಶನಿಯನ್ನು ಸುಳಿಯ ಗೊಟ್ಟಿವರಲ್ಲ. ಇದು ಇಂದಿನ ಅನೇಕ ಯುವ ಸಾಹಿತಿಗಳಿಗೆ ಮಾದರಿಯಾಗಬೇಕಾಗಿದೆ.

'ಕನ್ನಡ ದಲಿತ ಸಾಹಿತ್ಯದ ವಿಭಿನ್ನ ಪ್ರಕಾರಗಳು ಕೃತಿಯ ಮುನ್ನ ಜಿ.ಆರ್.ಟಿ ಯವರು 'ಕನ್ನಡ ದಲಿತ ಸಾಹಿತ್ಯದ ನೆಲೆ' ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. ಅದರ ವಿಸ್ತೃತರೂಪವೇ ಈ ಕೃತಿ ಪ್ರೊ.ಶಿವರಾಮಯ್ಯನವರು ಗುರುತಿಸಿರುವ ಹಾಗೆ ಡಾ.ಜಿ.ಆರ್.ತಿಪ್ಪೇಸ್ವಾಮಿಯವರು 'ದುಡಿಮೆಗಾರ ಜೇನುನೊಣ'ವಿದ್ದಂತೆ. ಸದಾ ಕ್ರಿಯಾಶೀಲವಾದ ಜೇನುನೊಣ 'ಅದು' 'ಇದು' ಎನ್ನದೆ ಎಲ್ಲ ಬಗೆಯ ಹೂವುಗಳಿಂದಲೂ ಬಂಡನ್ನು ಹೀರಿ ತಂದು ಸಂಗ್ರಹಿಸುವ ಹಾಗೆ ಇವರು ಪ್ರಸ್ತುತ ಕೃತಿಯಲ್ಲಿ ಕೆಲಸ ಮಾಡಿದ್ದಾರೆ.

**ಉಪಸಂಹಾರ**

ಕನ್ನಡ ದಲಿತ ಸಾಹಿತ್ಯದ ಕಾವ್ಯ ಕಥೆ ಕಾದಂಬರಿ ನಾಟಕ ವಿಚಾರ ಸಾಹಿತ್ಯ ಆತ್ಮಕಥೆ ವಿಮರ್ಶೆ ಮುಂತಾದ ಪ್ರಕಾರಗಳನ್ನು ಸಾಕಷ್ಟು ವಿಸ್ತೃತವಾಗಿಯೇ ಪರಿಚಯಿಸಿದ್ದಾರೆ. ಹಿರಿ–ಕಿರಿ ಲೇಖಕರೆನ್ನದೆ ತಮ್ಮ ಅಧ್ಯಯನದ ವ್ಯಾಪ್ತಿಗೆ ಎಲ್ಲರನ್ನೂ ದಕ್ಕಿಸಿಕೊಂಡು ಎಲ್ಲೂ ಅವರಿಗೆ ಅನ್ಯಾಯವಾಗದ ಹಾಗೆ ಸಮತೂಕದ ವಿಶ್ಲೇಷಣೆ ವಿವರಣೆಗಳೊಂದಿಗೆ ಪರಿಚಯಿಸಿರುವುದು ಅನುಕರಣೀಯವಾಗಿದೆ. ಇದಕ್ಕೂ ಮೊದಲ ಭಾಗದಲ್ಲಿ ದಲಿತ ಸಾಹಿತ್ಯ ಅದರ ಪ್ರೇರಣೆ ಪ್ರಭಾವ ಹಾಗೂ ದಲಿತ ಬಂಡಾಯ ಸಂಬಂಧವನ್ನು ಕುರಿತು ಚರ್ಚಿಸಿರುವುದು ಸೂಕ್ತವಾಗಿದೆ. ಜೊತೆಗೆ ಒಂದು ಬಗೆಯ ಸಂಶೋಧನೆಯ ಶಿಸ್ತು ಪ್ರಾಪ್ತವಾಗಿದೆ. ಐತಿಹಾಸಿಕ ನೆಲೆಯಿಂದ ವರ್ತಮಾನದ ವಿಚಾರದವರೆಗೆ ಎಲ್ಲವೂ ದೊರಕಿದಂತಾಗಿದೆ. ಹಾಗಾಗಿ ಈ ಕೃತಿಗೆ ಒಂದು ಆಕರ ಗ್ರಂಥದ ಸ್ವರೂಪ ಬಂದಿದೆಯೆನ್ನಬಹುದು ಸಮಗ್ರ ಸಾಹಿತ್ಯ ಚರಿತ್ರೆಯ ಸಂಪುಟದಂತೆ ಭಾಸವಾಗುತ್ತದೆ. ಇದರಲ್ಲಿ ಮಾಹಿತಿಯ ಸಮೃದ್ಧಿ ವಿಶ್ಲೇಷಣೆಯ ವಿಧಾನ ಪರಿಚಯಾತ್ಮಕ ಪರಿಭಾಷೆಗಳು ಸುಗಮಿಸಿವೆಯೆನ್ನಬಹುದು.

**ಪರಾಮರ್ಶನ ಗ್ರಂಥಗಳು**


- ಚಿತ್ತಯ್ಯ ಪೂಜಾರ್. ಡಿ.ಕೆ. (2016). ಸಾಂಸ್ಕೃತಿಕ ಸಂಕಥನ. ರಚನ ಪ್ರಕಾಶನ. ಮೈಸೂರು.
- ತಿಪ್ಪೇಸ್ವಾಮಿ. ಜಿ.ಆರ್. (1985). ಪ್ರಣಿತ (ವಿಮರ್ಶೆ). ವೇನ ಪ್ರಕಾಶನ. ಬೆಂಗಳೂರು.
- ತಿಪ್ಪೇಸ್ವಾಮಿ. ಜಿ.ಆರ್. (2001). ಅಭಿಮುಖ (ವಿಮರ್ಶೆ). ಚೇತನ ಬುಕ್ ಹೌಸ್. ಮೈಸೂರು.
- ತಿಪ್ಪೇಸ್ವಾಮಿ. ಜಿ.ಆರ್. (2001). ಕನ್ನಡ ದಲಿತ ಸಾಹಿತ್ಯದ ನೆಲೆ. ವಿಚಾರವಾದಿ ಪ್ರಕಾಶನ. ಮೈಸೂರು.